ಓ.ಎಸ್. ನಂಬರಃ 20/2020

ಡಿ. ಡಬ್ಲ್ಯೂಃ 1

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು ,  ತಾಃ   19/09/2024 )

ಮುಂದುವರೆದ ಪಾಟೀ ಸವಾಲು : ವಾದಿ  ಪರ ಶ್ರೀ  ಆರ್ ಆರ್ ಎಸ್ ವಕೀಲರಿಂದ,

ನಾನು ಈ ದಾವೆಯಲ್ಲಿ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಂದು ನನಗೆ ಗೊತ್ತು. ಜಟ್ಟಯ್ಯ ಸುಕ್ರಯ್ಯ ದೇವಾಡಿಗ ಪೂಜಾರಿ ಮನೆ  ಯಾರು ಎಂದು ನನಗೆ ಗೊತ್ತು.  ಸದ್ರಿಯವರಿಗೆ ಮೂರು ಜನ ಗಂಡು ಮಕ್ಕಳು ಮತ್ತು ಒಂದು ಹೆಣ್ಣು ಮಗಳು ಇರುತ್ತಾರೆ.  ಸದ್ರಿ ಜಟ್ಟಯ್ಯ ಸುಕ್ರಯ್ಯ ದೇವಾಡಿಗ ಪೂಜಾರಿ ಮನೆ  ಇವರ ಮರಣಾ ನಂತರ ದಾವಾ ಆಸ್ತಿಯಲ್ಲಿ ಅವರ ಹೆಂಡತಿ ಮಕ್ಕಳ

**ಡಿ. ಡಬ್ಲ್ಯೂಃ 1**

ಹೆಸರು ವಾರಸಾ ನಾತೆಯಲ್ಲಿ ಪ್ರತ್ಯೇಕವಾಗಿ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಅವರ ಹೆಸರು ದಾಖಲಾಗಿರುತ್ತದೆ ಹಾಗೆ ನಮ್ಮ ಹೆಸರು ಪ್ರತ್ಯೇಕವಾಗಿ ದಾಖಲಾಗಿರತ್ತದೆ ಎಂದು ಹೇಳಿರುತ್ತಾರೆ. ಆ ರೀತಿ ವಾರಸಾ ನಾತೆಯಲ್ಲಿ ದಾಖಲಾದ ನಮ್ಮ ದಾಖಲಾತಿಗಳನ್ನು ನೋಡಿರುತ್ತೇನೆ, ವಾದಿಗಳ ದಾಖಲಾತಿಗಳನ್ನು ನೋಡಿರುವುದಿಲ್ಲ.

2. ವಾದಿಗಳು ಈ ದಾವೆಯಲ್ಲಿ ಹಾಜರುಪಡಿಸಿದ ದಾಖಲಾತಿಗಳ ಬಗ್ಗೆ ನನ್ನ ವಕೀಲರನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಈ ದಾವೆಯಲ್ಲಿ ನಮ್ಮ ಉದಾಹರಣೆಯನ್ನು ಹಾಕಿರುತ್ತೇವೆ. ಅದರಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇವೆ. ಉದಾಹರಣೆಯನ್ನು ತಯಾರಿಸಲು ವಕೀಲರಿಗೆ ನಾನೇ ಹೇಳಿರುತ್ತೇನೆ. ನಮ್ಮ ಆಸ್ತಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ವಾದಿಯವರು ತಮ್ಮ ವಾದ ಪತ್ರದಲ್ಲಿ ಏನು ಬರೆಸಿದ್ದಾರೆಂದು ನಾನು ತಿಳಿದುಕೊಂಡಿರುತ್ತೇನೆ. ಹಾಗೆ ಅವರು ಏನು ಪರಿಹಾರ ಕೇಳಿದ್ದಾರೆಂದು ನಾನು ತಿಳಿದುಕೊಂಡಿರುತ್ತೇನೆ. ವಾದಿಗಳ ದಾವಾ ಆಸ್ತಿಯ ಉತ್ತರಕ್ಕೆ ಜಂಗನಮನೆ ಗೋಪಾಲ ಮತ್ತು ಈಶ್ವರ ಅವರ ಮನೆ ಇರುತ್ತದೆ ಎಂದರೆ ಸರಿ. ಅದೇ ರೀತಿ ದಕ್ಷಿಣಕ್ಕೆ ದುರ್ಗಯ್ಯನವರ ಮನೆ ಮತ್ತು ಕೊಟ್ಟಿಗೆ ಇರುತ್ತದೆ ಎಂದರೆ ಸರಿ. ಪೂರ್ವಕ್ಕೆ ರಸ್ತೆ ಇರುತ್ತದೆ ಎಂದರೆ ಈಗ ರಸ್ತೆಯಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಪಶ್ಚಿಮಕ್ಕೆ ಪೂಜಾರಿ ನಾಗಪ್ಪರವರ ಕೊಟ್ಟಿಗೆ ಇರುತ್ತದೆ ಎಂದರೆ ಸರಿ. ನನ್ನ ಉದಾಹರಣೆಯಲ್ಲಿ ನಮ್ಮ ಜಾಗದ ಗಡಿಗುರುತುಗಳನ್ನು ಬರೆಸಿ ಹಾಕಿರುತ್ತೇನೆ. ನನ್ನ ಉದಾಹರಣೆಯಲ್ಲಿ ಏನು ಬರೆದಿದ್ದೇನೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**